1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 67/2019

**ಸಾಕ್ಷಿಯನ್ನು ದಿಃ 13.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಮಹೇಶ್ ಜೆ. ಈ | ಸಿಡಬ್ಲ್ಯೂ:13 | ಪಿಡಬ್ಲ್ಯೂ: 9 |
| ತಂದೆಯ ಹೆಸರು | ಲೇಟ್ ಬೀರೇಗೌಡ | | |
| ವಯಸ್ಸು | 54 ವರ್ಷ | | |
| ಕೆಲಸ | ಪಿ.ಎಸ್.ಐ ಸಕಲೇಶಪುರ ನಗರ ಪೊಲೀಸ್ ಠಾಣೆ, ಸಕಲೇಶ್ ಪುರ ,ಹಾಸನ | | |
| ವಾಸಸ್ಥಳ | ಸಕಲೇಶಪುರ. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿಃ 01.01.2018 ರಿಂದ ದಿಃ15.08.2020 ರ ವರೆಗೆ ನಾನು ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 31.05.2018 ರಂದು ಚಾಸಾ 12 ರವರಿಂದ ಕಡತವನ್ನು ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿಃ 02.06.2018 ರಂದು ಈ ಪ್ರಕರಣದ ಆರೋಪಿಗಳ ಪತ್ತೆಗಾಗಿ ಚಾಸಾ 10 ರಿಂದ 12 ರವರನ್ನು ನೇಮಿಸಿಕೊಂಡು ನಾನು ಗಸ್ತಿನಲ್ಲಿ ಇರುವಾಗ ಹುಣಸೂರು ಹೊಸ ಪೋಸ್ಟ್ ಆಫೀಸು ರಸ್ತೆಯಲ್ಲಿ ಇರುವ ಬೆಳಗಿನ ಜಾವ 3.00 ಗಂಟೆ ಸಮಯಲ್ಲಿ ಒಂದು ಆಕ್ಟಿವಾ ಹೊಂಡಾದಲ್ಲಿ ಬರುತ್ತಿದ್ದ 3 ಜನ ವ್ಯಕ್ತಿಗಳು ನಮ್ಮನ್ನು ಕಂಡು ಓಡಿಹೋದರು. ತಕ್ಷಣ ಚಾಸಾ 12 ರವರಿಗೆ ಕರೆ ಮಾಡಿಸಿ ಅವರನ್ನು ಸುತ್ತು ವರೆಯುವಂತೆ ಹೇಳಿದಾಗ ರವಿ ಸಾಲಿಯಾನ್ ಅಂಗಡಿ ಮುಂದೆ ಅವರನ್ನು ಸುತ್ತು ವರೆದು ಹಿಡಿದು

ಕೇಳಲಾಗಿ ಸದರಿ ವ್ಯಕ್ತಿಯ ಹೆಸರು, ವಿಳಾಸ ಕೇಳಲಾಗಿ ಒಬ್ಬ ಕೀರಣ ಅಲಿಯಾಸ್ ಸುಧೀ, 2 ನೇ ಯ ವಿನೋದ ಅಲಿಯಾಸ್ ಸೂರಿ ಎಂದು 3 ನೇಯವ ಸಂದೀಪ್ ಅಲಿಯಾಸ್ ಮಿಣ್ಣಿ ಎಂದು ತಿಳಿಸಿದರು. ಅವರನ್ನು ವಶಕ್ಕೆ ಪಡೆದು ಠಾಣೆಗೆ ತಂದು ವಿಚಾರಣೆಗೆ ಒಳಪಡಿಸಿ ಇಬ್ಬರು ವ್ಯಕ್ತಿಗಳು ಈ ಪ್ರಕರಣಕ್ಕೆ ಸಂಬಂಧಿಸಿದ ಕೃತ್ಯವನ್ನು ಒಪ್ಪಿಕೊಂಡ ಮೇರೆಗೆ ಅವರ ಸ್ವ ಇಚ್ಛೆ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇವೆ. ಅವರ ಹೇಳಿಕೆಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಕೃತ್ಯವನ್ನು ಒಪ್ಪಿಕೊಂಡಿರುತ್ತಾರೆ.

ಸದರಿ ಕೀರಣ್ ಮತ್ತು ವಿನೋದ್ ಸ್ವ ಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿದ್ದು, ಅವುಗಳನ್ನು ನಿಪಿ. 8 ಮತ್ತು 9 ಎಂದು ಗುರುತಿಸಲಾಯಿತು. ಸದರಿ ರವರು ಸ್ವ ಇಚ್ಛಾ ಹೇಳಿಕೆಯಲ್ಲಿ ಒಟ್ಟು 7 ಪ್ರಕರಣಗಳಲ್ಲಿ ಕೃತ್ಯ ಎಸಗಿರುವುದಾಗಿ ತಿಳಿಸಿರುತ್ತಾರೆ. ಸದರಿ ಮೊಕದ್ದಮೆ ಸಂಖ್ಯೆ 252, 253, 254, 296, 297, 299 ಮತ್ತು 301 ಆಗಿರುತ್ತದೆ. ಠಾಣೆಯಲ್ಲಿ ಅವರು ಹಾಜರು ಪಡಿಸಿದ ಕೆಎ 32 ಇಪಿ 2953 ನಂಬರ್ ನ ಕಪ್ಪು ಬಣ್ಣದ ಹೊಂಡಾ ಆಕ್ಟಿವಾ ಸ್ಕೂಟರ್ ಅನ್ನು ವಶಕ್ಕೆಪಡೆದಿರುತ್ತೇನೆ. ಸದರಿ ಬೈಕ್ ನ 2 ಕೀ ಗಳು, 2 ಕಬ್ಬಿಣ ಸರಳುಗಳು, ಆರೋಪಿ ಕಿರಣ್ ಬಳಿ ಇದ್ದ ಬಿಳಿ ಮತ್ತು ಗೋಲ್ಡನ್ ಬಣ್ಣದ ಓಪ್ಪೊ ಕಂಪನಿಯ 2 ಹಳೆ ಮೊಬೈಲ್ ಗಳು, 2 ನೇ ಮೊಬೈಲ್ ನಲ್ಲಿ ಸಿಮ್ ನಂ. 9108395447, 1 ನೇ ಮೊಬೈಲ್ ನ ಸಿಮ್ ನಂ. 7975235054, 9742838818 ಇರುತ್ತವೆ. ಕಿರಣ್ ಬಳಿ 2000/- ರೂ. ನಗದು ಹಣ, ಆರೋಪಿ ವಿನೋದ್ ನ ಬಳಿ 1000/- ನಗದು ಹಣ ವಶಕ್ಕೆ ಪಡೆದು ಅಮಾನತ್ತು ಮಹಜರ್ ಅನ್ನು ಚಾಸಾ 5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 6.00 ರಿಂದ 7.00 ಗಂಟೆ ಜರುಗಿಸಿರುತ್ತೇನೆ.

ಸದರಿ ಮಹಜರ್ ಗೆ ಆರೋಪಿಗಳಾದ ಕಿರಣ್ ಮತ್ತು ವಿನೋದ್ ರವರ ಸಹಿ ಪಡೆದಿರುತ್ತೇನೆ. ನಿಪಿ. 3 ಅಮಾನತ್ತು ಮಹಜರ್ ನಲ್ಲಿ ಕಿರಣ್ ಮತ್ತು ವಿನೋದ್ ರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಮೇಲ್ಕಂಡ ವಶಕ್ಕೆ ಪಡೆದ ವಸ್ತುಗಳನ್ನು ಮಾಲುಪಟ್ಟಿ ಸಂಖ್ಯೆ 121/2018 ರಂತೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪಂಚರಾಗಿ ಸಹಕರಿಸಿ ಚಾಸಾ 5 ಮತ್ತು 7 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ.

ಈ ಹಂತದಲ್ಲಿ ತನಿಖೆ ಪೂರ್ಣಗೊಂಡಿದ್ದರಿಂದ, ಆರೋಪಿಗಳ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೆನೆ. 1 ನೇ ಆರೋಪಿಯನ್ನು ಮೈಸೂರಿನ ಜೆ.ಸಿ ಮೂಲಕ ಹಾಜರು ಪಡಿಸಿದ್ದು, ಅವರನ್ನು ಹಾಗೂ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಸಿಸಿ 752 /2018 ರಲ್ಲಿ ಹಾಜರುಪಡಿಸಿದ 2 ರಾಡುಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್.ಎನ್ ವಕೀಲರಿಂದಃ</u>**

ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸುವ ಮೊದಲು ಏನಾದರೆ ಲೋಪದೋಷಗಳು ಇದ್ದರೆ ಅವುಗಳನ್ನು ಸರಿ ಪಡಿಸಿ ಸಲ್ಲಿಸಬೇಕು ಎಂದರೆ ಸರಿ. ಚಾಸಾ 12 ರವರಿಂದ ಕಡತವನ್ನು ಸ್ವೀಕರಿಸಿದಾಗ ಅದನ್ನು ಪರಿಶೀಲಿಸಿರುತ್ತೇನೆ. ಯಾವುದಾದರೂ ದೂರು ಬಂದರೆ ಸದರಿ ದೂರಿನ ಅನ್ವಯ ಪ್ರಕರಣದ ದಾಖಲಿಸಲಾಗುತ್ತದೆ ಎಂದರೆ ಸರಿ. ಯಾವುದಾದರೂ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿದ್ದರೆ ಅದಕ್ಕೆ ಮಾಲುಪಟ್ಟಿ ಸಂಖ್ಯೆ ಕೊಡಲಾಗುತ್ತದೆ ಎಂದರೆ ಸರಿ. ಬೇರೆ ಪ್ರಕರಣಕ್ಕೆ ಸ್ಥಧಿಸಿದ ಇದ್ದಂಹತ ಮದ್ದೇಮಾಲುಗಳನ್ನು ಇನ್ನೊಂದು ಪ್ರಕರಣಕ್ಕೆ ಸೇರಿಸುವುದಿಲ್ಲ ಎಂದರೆ ಸರಿಯಲ್ಲ ಸೇರಿಸುತ್ತೇವೆ ಎನ್ನುತ್ತಾರೆ. ಬೇರೆ ಪ್ರಕರಣಕ್ಕೆ ಸಂಬಂಧಿಸಿದ ಮುದ್ದೇಮಾಲುಗಳನ್ನು ಈ ಪ್ರಕರಣಕ್ಕೂ ಅಳವಡಿಸಿದ್ದೇನೆ ಎಂದರೆ ಸರಿ.

ಆ ದಿನ ಆರೋಪಿಗಳನ್ನು ವಶಕ್ಕೆ ಪಡೆದಾಗ ನಮ್ಮ ಠಾಣೆಯಿಂದ ಒಟ್ಟು ನಾನು ಸೇರಿ 4 ಜನ ಇದ್ದೇವು. ಪೋಸ್ ಆಫೀಸು ಠಾಣೆಯಿಂದ ಸುಮಾರು 100 ಮೀಟರ್ ದೂರದಲ್ಲಿ ಇದೆ. ಆ ಸಂದರ್ಭದಲ್ಲಿ ಆರೋಪಿಗಳು ಯಾರು ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ 3 ಜನ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿತ್ತು. ಒಂದು ವೇಳೆ ಮೂರು ಜನರನ್ನು ವಶಕ್ಕೆ ಪಡೆದಿದ್ದರೆ ಸದರಿ ಮೂವರ ಮೇಲೂ ಪ್ರಕರಣ ದಾಖಲಿಸುತ್ತಿದ್ದೆ ಆ ದಿನ ಮೂರು ಜನರನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಅಲ್ಲದೆ ಮೂರು ಜನರ ಸ್ವ ಇಚ್ಛಾ ಹೇಳಿಕೆಗಳನ್ನು ಪಡೆಯಲಾಗುತ್ತಿತ್ತು ಎಂದರೆ ಸರಿಯಲ್ಲ. ಅಮಾನತ್ತು ಮಹಜರ್ ನಲ್ಲಿ

ಮೂವರು ಆರೋಪಿಗಳ ಸಹಿಗಳನ್ನು ಠಾಣೆಯಲ್ಲಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಪಂಚರಿಗೆ ನೊಟೀಸು ಕೊಟ್ಟಿದ್ದೇವು ಆದರೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಹಾಗೆ ನೊಟೀಸು ಕೊಟ್ಟಿದ್ದೆ ಆದರೆ ಅವದನ್ನು ಹಾಜರು ಪಡಿಸುತ್ತಿದ್ದೇವು, ಹಾಗೆ ಕೊಟ್ಟಿಲ್ಲವಾದ ಕಾರಣ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳಲ್ಲಿ ಮೂರು ಜನ ಆರೋಪಿಗಳ ಹೆಸರು ಬರೆಯಲಾಗಿದೆ ಎಂದರೆ ಸರಿ. ಸದರಿ ವ್ಯಕ್ತಿಗಳು ಯಾವುದೆ ಕೃತ ವೆಸಗಿಲ್ಲ ಆದರೊ ಪ್ರಕರಣ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ವೈನ್ ಶಾಪ್ ನ ಬಾಗಿಲು ಮುರಿದ ಬಗ್ಗೆ ಅದರ ಪೋಟೊ ಹಾಜರುಪಡಿಸಿಲ್ಲ. ಕೃತ್ಯ ನಡೆದ ಸ್ಥಳದ ಮಹಜರ್ ಅನ್ನು ಹಾಜರು ಪಡಿಸಲಾಗಿದೆ ಎನ್ನುತ್ತಾರೆ. ಕೃತ್ಯ ನಡೆಯದ ಕಾರಣ ಪೋಟೊ ಹಾಕಿಲ್ಲ ಎಂದರೆ ಸರಿಯಲ್ಲ. ಯಾವುದೆ ಆರೋಪಿಗಳಿಂದ ಹಣವನ್ನಾಗಲಿ, ಮೊಬೈಲ್, ಸಿಮ್ ಗಳನ್ನು ವಶ ಪಡಿಸಿಕೊಂಡಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಅಂಶಕ್ಕಾಗಿ ಆರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸ್ ಗ ಸಂಬಂಧ ಪಡದ ಮುದ್ದೇಮಾಲನ್ನು ಸೇರಿಸಲಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.